

ನಾನಾ ವಿಧದ ಬಣ್ಣ ಬಣ್ಣದ ಗಾಜಿನ ಹೂವುಗಳು

# ಚಿಹುಲಿ ಗಾಜಿನ ತೋಟ

■ ಚಿತ್ರ ಲೇಖನ
**ಪ್ರೇಮಲತಾ ವೆಂಕಟೇಶ್**

**ಹೂ**ವಿನ ತೋಟ ಗೊತ್ತು; ಆದರೆ ಇದೇನಿದು ಗಾಜಿನ ತೋಟ..! ಎಂದು ಅಚ್ಚರಿಯೆ? ಎಲ್ಲರೂ ನೋಡಲೇಬೇಕಾದ ಈ ಸುಂದರ ಗಾಜಿನ ತೋಟ ಅಮೆರಿಕಾದ ಸಿಯಾಟಲ್ ನಗರದಲ್ಲಿದೆ.

ಸಿಯಾಟಲ್ ನಗರವು ಅಮೆರಿಕಾದ ಕರಾವಳಿಯ ಉತ್ತರದ ತುದಿಯಲ್ಲಿದ್ದು ಕೆನಡಾಕ್ಕೆ ಹೊಂದಿಕೊಂಡಿದೆ. ವಿಶ್ವಪ್ರಸಿದ್ಧ ಬೋಯಿಂಗ್ ವಿಮಾನ ಮತ್ತು ಮೈಕ್ರೋಸಾಫ್ಟ್ ಕಂಪೆನಿಗಳ ತವರೂರು ಇದು. ನಗರದ ಹೃದಯ ಭಾಗದಲ್ಲಿರುವ ಫೆಸಿಫಿಕ್ ಸೈನ್ಸ್ ಸೆಂಟರ್‌ನಲ್ಲಿದೆ– ಈ ಗಾಜಿನ ಕಲಾಕೃತಿಗಳ ಹೂದೋಟ.

ಸಿಯಾಟಲ್ ನಗರದಲ್ಲಿ ಮಗಳ ಜೊತೆಯಲ್ಲಿ ಇರಲೆಂದು ಒಂದು ತಿಂಗಳ ಬಿಡುವು ಮಾಡಿಕೊಂಡು ಹೋಗಿದ್ದೆ. ವಾರಾಂತ್ಯದಲ್ಲಿ ಊರು ಸುತ್ತುವ ಕೆಲಸ. ಹೀಗೆ ಸುತ್ತುವಾಗ ನೋಡಿದ್ದು ಫೆಸಿಫಿಕ್ ಸೈನ್ಸ್ ಸೆಂಟರ್. ಐಮ್ಯಾಕ್ಸ್ ಥಿಯೇಟರ್ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ವಸ್ತುಪ್ರದರ್ಶನಗಳು ಇಲ್ಲಿವೆ. ಇದರ ಜತೆಗೆ ಚಿಹುಲಿ ಗಾಜಿನ ತೋಟದ ಪ್ರದರ್ಶನ ಕೇಂದ್ರ ಈ ಸಲದ ಮೇ ತಿಂಗಳಿಂದ ಸೇರ್ಪಡೆಯಾಗಿದೆ. ಈ ಗಾಜಿನ ಕಲಾಕೃತಿಗಳ ತೋಟದ ಬಗ್ಗೆ ಮೊದಲು ನಮಗೆ ಮಾಹಿತಿ ಇರಲಿಲ್ಲ. ಐಮ್ಯಾಕ್ಸ್ ಥಿಯೇಟರ್‌ನಲ್ಲಿ 'ದಿ ಆರ್ಕ್ಟಿಕ್' ಎಂಬ ಸುಂದರ 3ಡಿ ಚಿತ್ರ ವೀಕ್ಷಿಸಿ ಹೊರಬರುವಾಗ ಈ

(8ನೇ ಪುಟ ನೋಡಿ)

ಸೂರಿನಲ್ಲಿ ಅರಳಿದ ಗಾಜಿನ ಹೂವುಗಳು

